## 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.165-2022

ದೋ.ಸಾ. 18
ಫಾ.ಸಾ. 13
ಪ್ರ.ವ.ಬೊ.ದಿನಾಂಕ. 20-12-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಭುವನೇಶ್ವರಿ ಎಂ.ಎಸ್. |
| ತಂದೆ / ಗಂಡನ ಹೆಸರು | - | ಎನ್.ಧನಂಜಯ ಕುಮಾರ್ |
| ವಯಸ್ಸು | - | 36 |
| ಉದ್ಯೋಗ | - | ಹಿರಿಯ ಸೈಂಟಿಫಿಕ್ ಆಫೀಸರ್, ಎಸ್ ಎಫ್ ಎಸ್ ಎಲ್, ಮಡಿವಾಳ, ಬೆಂಗಳೂರು |
| ವಾಸ ಸ್ಥಳ | - | ಬೆಂಗಳೂರು |

ಸಾಕ್ಷಿಯ ವಿಚಾರಣೆಯನ್ನು ವಿಸಿ ಮೂಲಕ ತೆಗೆದುಕೊಳ್ಳಲಾಯಿತು.
ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು 2019 ರಿಂದ ಜೂನ್ 2021 ರವರೆಗೆ ದಾವಣಗೆರೆಯ ಆರ್ ಎಫ್ ಎಸ್ ಎಲ್ ಕಛೇರಿಯಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಜೂಯಾಲಾಜಿಯಲ್ಲಿ ಎಂ ಎಸ್ ಸಿ ವ್ಯಾಸಂಗ ಮಾಡಿರುತ್ತೇನೆ. ನಾನು 2014 ರಿಂದ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ದಿಃ 02-11-2020 ರಂದು ಕೆಟಿಜೆ ನಗರದ ಡಬ್ಲ್ಯೂಪಿಸಿ ಚಾ.ಸಾ.19 ರವರು ಕೆಲವೊಂದು ವಸ್ತುಗಳನ್ನು ಪರೀಕ್ಷೆಗಾಗಿ ನಮ್ಮ ಕಛೇರಿಗೆ ತಂದು ಹಾಜರುಪಡಿಸಿದ್ದು, ಅವು ಈ ಪ್ರಕರಣದ ವಸ್ತುಗಳಾಗಿರುತ್ತವೆ. ನಂತರ ನನಗೆ ಸದರಿ ವಸ್ತುಗಳನ್ನು ಪರೀಕ್ಷಿಸಲು ಕಳುಹಿಸಲಾಗಿದ್ದು, ಅವುಗಳನ್ನು ನೋಡಿದಾಗ ಸಲ್ಲಿಸಿದ ವಸ್ತುಗಳ ಸೀಲ್ ಸುಸ್ಥಿತಿಯಲ್ಲಿರುವುದು ಕಂಡುಬಂದಿರುತ್ತದೆ. ಅಲ್ಲದೇ ಮಾದರಿ ಸೀಲಿಗೆ ಹೋಲಿಕೆಯಾಗಿರುತ್ತದೆ. ನಂತರ ನಾನು ಸದರಿ ವಸ್ತುಗಳನ್ನು ತೆರೆದು ನೋಡಿದಾಗ ಅವುಗಳಲ್ಲಿ ಒಂದು ರಕ್ತ ತಾಗಿದ ಮಣ್ಣು, ಸಾದಾ ಮಣ್ಣು, ಒಂದು ಚಾಕು, ಒಂದು ಶರ್ಟ್ ಹಾಗೂ ಒಂದು ಪ್ಯಾಂಟ್ ಕಂಡುಬಂದಿದ್ದು, ಅವುಗಳಿಗೆ ತನಿಖಾಧಿಕಾರಿಯು ನೀಡಿದ ನಂಬರ್ ಗಳನ್ನೇ ನೀಡಿರುತ್ತೇನೆ.

ನಂತರ ಸದರಿ ವಸ್ತುಗಳನ್ನು ಕೆಮಿಕಲ್ ಮತ್ತು ಮೈಕ್ರೋಸ್ಕೋಪಿಕ್ ಪರೀಕ್ಷೆಗಾಗಿ ಪಡೆದುಕೊಂಡಿದ್ದು, ಆ ಸಮಯದಲ್ಲಿ ತನಿಖಾಧಿಕಾರಿಯು ನನ್ನ ಬಳಿ ಸದರಿ ವಸ್ತುಗಳ ಮೇಲೆ ರಕ್ತದ ಅಂಶ ಇದೆಯೇ, ಇದ್ದಲ್ಲಿ ಅದು ಮನುಷ್ಯ ರಕ್ತವೇ ಹಾಗೂ ಅದರ ಗುಂಪನ್ನು ಕೇಳಿಕೊಂಡಿದ್ದು, ನಂತರ ಸದರಿ ವೈಜ್ಞಾನಿಕ ಸಾಧನಗಳ ಮೂಲಕ ಪರೀಕ್ಷಿಸಿದಾಗ ಸದರಿ ವಸ್ತುಗಳಲ್ಲಿ 1, 3, 4 ಮತ್ತು 5 ರಲ್ಲಿ ಮಾನವ ರಕ್ತ ಕಂಡುಬಂದಿದ್ದು, ಅವುಗಳು O ಗುಂಪಿನ ರಕ್ತದ ಮಾದರಿಗಳಾಗಿರುತ್ತವೆ. ನಂತರ ನಾನು ಪುನಃ ಸದರಿ ವಸ್ತುಗಳನ್ನು ಪ್ಯಾಕ್ ಮಾಡಿ ಅರಗು ಸೀಲನ್ನು ಹಾಕಿ ತನಿಖಾಧಿಕಾರಿಗೆ ವಾಪಾಸು ಸಲ್ಲಿಸಿರುತ್ತೇನೆ. ಅಲ್ಲದೇ ತದನಂತರ ತನಿಖಾಧಿಕಾರಿಯ ಕೋರಿಕೆಯ ಮೇರೆಗೆ ನನ್ನ ಅಭಿಪ್ರಾಯವನ್ನು ಹಾಗೂ ಮಾದರಿ ಸೀಲನ್ನು ತನಿಖಾಧಿಕಾರಿಗೆ ಸಲ್ಲಿಸಿರುತ್ತೇನೆ. ಸಾಕ್ಷಿಗೆ ಈಗ ಮು.ಮಾ.1, 3, 5, 8 ಹಾಗೂ 10 ನ್ನು ತೋರಿಸಲಾಗಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಅಲ್ಲದೇ ಮು.ಮಾ.2, 4, 6, 9 ಮತ್ತು 11 ರ ಮೇಲೆ ಇರುವ ತನ್ನ ಸಹಿ ಹಾಗೂ ಇಲಾಖಾ ಮೊಹರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಗುರುತಿಸಿದ ಸಹಿಗಳನ್ನು ಮು.ಮಾ.2(ಡಿ), 4(ಡಿ), 6(ಡಿ), 9(ಡಿ) ಹಾಗೂ 11(ಡಿ) ಎಂದು ಗುರುತಿಸಲಾಯಿತು. ಅಲ್ಲದೇ ಮು.ಮಾ.1 ಮತ್ತು 3 ಕ್ಕೆ ಕೂಡ ರಕ್ತ ತಾಗಿತ್ತು. ಸದರಿ ಶರ್ಟು ಮತ್ತು ಪ್ಯಾಂಟಿಗೆ ತಾಗಿರುವ ರಕ್ತದ ಭಾಗದ ಬಟ್ಟೆಗಳನ್ನು ಕತ್ತರಿಸಿ ಅವುಗಳನ್ನು ಪರೀಕ್ಷೆಗಾಗಿ ಉಪಯೋಗಿಸಿಕೊಂಡಿರುತ್ತೇವೆ. ಸಾಕ್ಷಿಯು ಗುರುತಿಸಿದ ವರದಿಯನ್ನು ನಿ.ಪಿ.27 ಎಂದು, ಮಾದರಿ ಸೀಲನ್ನು ನಿ.ಪಿ.28 ಎಂದು, ಅದರಲ್ಲಿ ರುವ ಸಾಕ್ಷಿಯ ಸಹಿಗಳನ್ನು ನಿ.ಪಿ.27(ಎ) ಮತ್ತು 28(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಒಂದು ಚಾಕುವಿನಿಂದ ಇಬ್ಬರ ಮೇಲೆ ಹಲ್ಲೆ ಮಾಡಿದಾಗ ಸದರಿ ಚಾಕುವಿಗೆ ಯಾರ ರಕ್ತ ತಾಗುವ ಸಾಧ್ಯತೆ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಯಾರ ರಕ್ತವು ಅದರ ಮೇಲೆ ಹೆಚ್ಚು ಅಂಟಿರುತ್ತದೆಯೋ ಅದು ನಮ್ಮ ಪರೀಕ್ಷೆಗೆ ದೊರೆಯುತ್ತದೆ ಎಂದು ನುಡಿದಿರುತ್ತಾರೆ. ಒಂದಾನುವೇಳೆ ತನಿಖಾಧಿಕಾರಿಯು ಇಬ್ಬರ ಮೇಲೆ ಒಂದೇ ಚಾಕುವಿನಿಂದ ಹಲ್ಲೆಯಾಗಿದೆ ಇಬ್ಬರ ರಕ್ತದ ಗುಂಪನ್ನು ಕೊಡಿ ಎಂದು ಕೇಳಿದಾಗ ನಾವು ಎರಡನ್ನು ಪರೀಕ್ಷೆಗೆ ಒಳಪಡಿಸುತ್ತೇವೆ, ಯಾವುದು ದೊರೆಯುತ್ತದೆಯೋ ಅದನ್ನು ನೀಡುತ್ತೇವೆ ಎಂದು ನುಡಿದಿರುತ್ತಾರೆ. ಮು.ಮಾ.5 ರ ಮೇಲೆ ರಕ್ತ ಇದೆ ಎಂದು ಹೇಳಲಾದ ರಕ್ತವು ಡಿಎನ್ ಎ ಪರೀಕ್ಷೆಗೆ ಒಳಪಡಿಸಿದಾಗ ಮಾತ್ರ ಇಂತವರ ರಕ್ತ ಎಂದು ಹೇಳಬಹುದು ಎಂದರೆ ಸರಿ. ನಿ.ಪಿ.27 ರಲ್ಲಿ ಮು.ಮಾ.5 ಯಾವ ಭಾಗದಲ್ಲಿ ರಕ್ತ ತಾಗಿತ್ತು ಎಂದು ನಾನು ನಮೂದಿಸಿಲ್ಲ ಎಂದರೆ ಸರಿ, ಆದರೆ ಅದು ನಮ್ಮ ಪರೀಕ್ಷಾ ಟಿಪ್ಪಣಿಯಲ್ಲಿ ಬರೆದಿರುತ್ತೇವೆ. ನಾನು ಪೋಲೀಸರ ಕೋರಿಕೆಯ ಮೇರೆಗೆ ಸುಳ್ಳು ವರದಿಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.12.20 16:09:31 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.165-2022

ದೋ.ಸಾ. 21
ಫಾ.ಸಾ. 12
ಪ್ರ.ವ.ಬೊ.ದಿನಾಂಕ. 20-12-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಹನುಮಂತಪ್ಪ ಟಿ.ಹೆಚ್. |
| ತಂದೆ / ಗಂಡನ ಹೆಸರು | - | ತಿಪ್ಪಣ್ಣ |
| ವಯಸ್ಸು | - | 48 |
| ಉದ್ಯೋಗ | - | ಮುಖ್ಯ ಪೇದೆ, ಹದಡಿ ಪೊಲೀಸ್ ಠಾಣೆ |
| ವಾಸ ಸ್ಥಳ | - | ಹದಡಿ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು 2018 ರಿಂದ 2024 ರವರೆಗೆ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 16-10-2020 ರಂದು ನಾನು ಮಧ್ಯಾಹ್ನ 2-00 ಗಂಟೆಯಿಂದ ಠಾಣಾ ಎಸ್ ಹೆಚ್ ಒ ಕರ್ತವ್ಯದಲ್ಲಿ ಇರುವಾಗ ಸಂಜೆ 4-30 ಗಂಟೆ ಸಮಯದಲ್ಲಿ ಸಿಜೆ ಆಸ್ಪತ್ರೆಯ ಹೊರ ಪೊಲೀಸ್ ಠಾಣೆಯಿಂದ ಬಂದ ಮಾಹಿತಿಯ ಮೇರೆಗೆ ನಾನು ಅಲ್ಲಿಗೆ ಹೋಗಿ ಎಂಎಲ್‌ಸಿ ವರದಿಯನ್ನು ಪಡೆದುಕೊಂಡಿದ್ದು, ಆ ಸಮಯದಲ್ಲಿ ಗಾಯಾಳುವನ್ನು ಅದಾಗಲೇ ಐಟೆಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ಮಾಹಿತಿ ಪಡೆದಿದ್ದು, ನಂತರ ಈ ವಿಷಯವನ್ನು ಚಾ.ಸಾ.23 ರವರಿಗೆ ದೂರವಾಣಿ ಮುಖಾಂತರ ತಿಳಿಸಿರುತ್ತೇನೆ. ಸದರಿ ಎಂಎಲ್ ಸಿ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿ.ಪಿ.26 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.26(ಬಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನಿ.ಪಿ.26 ರಲ್ಲಿ ಮಧ್ಯಾಹ್ನ 2-00 ಗಂಟೆಗೆ ಗಲಾಟೆಯಾಗಿದೆ ಎಂದು ನಮೂದು ಇದೆ ಎಂದರೆ ಸರಿ. ನನಗೆ ನಿ.ಪಿ.26 ರ ಕುರಿತು ಮಾಹಿತಿಯನ್ನು ಘಟನೆಯಿಂದ 2 ವರೆ ಗಂಟೆ ವಿಳಂಬವಾಗಿ ನೀಡಲಾಗಿದೆ ಎಂದರೆ ಸರಿ. ಸದರಿ 2 ವರೆ ಗಂಟೆಯ ಅವಧಿಯಲ್ಲಿ ಸಾರ್ವಜನಿಕರಾಗಲಿ ಹಾಗೂ ಪೋಲೀಸರಾಗಲಿ ನನಗೆ ದೂರವಾಣಿ ಮಾಡಿ ಈ ಪ್ರಕರಣದ ಮಾಹಿತಿ ತಿಳಿಸಿದ್ದು ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.12.20 16:09:38 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.